ಒ. ಎಸ್. ನಂ.58/2020

ಪಿಡಬ್ಲೂ-1

ದಿನಾಂಕಃ 11.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ನನಗೂ ಮತ್ತು ಪ್ರತಿವಾದಿಗಳಿಗೂ ಸುಮಾರು 20 ವರ್ಷಗಳಿಂದ ಜಮೀನಿನ ವಿಷಯವಾಗಿ ವ್ಯಾಜ್ಯಾ ನಡೆಯುತ್ತಿದೆ. ಸರ್ವೆ ನಂಬರ್ 66 ಕ್ಕೆ ಸಂಬಂದಿಸಿದಂತೆ ಸುಮಾರು ದಾವೆಗಳು ನಡೆದಿವೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ 100 ಎಕರೆಗೂ ಮೇಲ್ಪಟ್ಟು ಜಮೀನು ಇರುತ್ತದೆ. ಸಾಮಾನ್ಯವಾಗಿ ಒಂದು ಕುಟುಬಕ್ಕೆ ಒಂದೇ ಸಾಗುವಳಿ ಚೀಟಿ ನೀಡುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನ ಮೇಲೆ ಸುಮಾರು 20 ವರ್ಷಗಳ ಹಿಂದೆ ದಾವೆ ಸಲ್ಲಿಸಿದ್ದೆ ಎಂದರೆ ಸರಿ. 1 ಎಕರೆ 2 ಗುಂಟೆ ಜಮೀನು ನನಗೆ ಸೇರಬೇಕೆಂದು ದಾವೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತಿನ ವಿಚಾರವಾಗಿ 20 ವರ್ಷಗಳಿಂದ ವ್ಯಾಜ್ಯಾ ಇದೆ ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆಗೆ ದರಖಾಸ್ತು ಮೂಲಕ ಮಂಜೂರಾಗಿರುತ್ತದೆ. ಆ ರೀತಿ ನನ್ನ ತಂದೆಗೆ ಮಂಜೂರಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಸರ್ವೆ ನಂಬರ್ 66 ಅನ್ನು ನನ್ನ ತಂಗಿ ನನಗೆ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತಾರೆ. ಹಕ್ಕು ಬಿಡುಗಡೆ ಮಾಡಿಕೊಟ್ಟ ನಂತರ ಖಾತೆ ಮಾಡಿಸಿಕೊಂಡಿರುತ್ತೇನೆ. ಹಕ್ಕು ಬಿಡುಗಡೆ ಮಾಡುವ ಮುಂಚಿತವಾಗಿ ಸದರಿ ಸ್ವತ್ತು ಯಾರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಹಕ್ಕು ಬಿಡುಗಡೆ ಪತ್ರದಲ್ಲಿರುವ ಸ್ವತ್ತಿಗೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ.ಸದರಿ ಹಕ್ಕು ಬಿಡುಗಡೆ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹಕ್ಕು ಬಿಡುಗಡೆ ಪತ್ರದಲ್ಲಿ 4 ಎಕರೆ ಜಮೀನಿನ ಪೂರ್ವಕ್ಕೆ 1 ನೇ ಪ್ರತಿವಾದಿ ಯವರ ಜಮೀನು, ಪಶ್ಚಿಮಕ್ಕೆ ನಮಗೆ ಸೇರಿದ ಸರ್ವೆ ನಂಬರ್ 66 ರ ಜಮೀನು, ಉತ್ತರಕ್ಕೆ ಅಂಕಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ಮರಿನಾಯಕರವರ ಜಮೀನು ಎಂದು ನಮೂದು ಇದೆ ಎಂದರೆ ಸರಿ.

ದಾವಾ ಎ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿ 1 ರವರ 2 ಎಕರೆ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಸರ್ಕಾರಿ ಓಣಿ ಎಂದರೆ ಸರಿಯಲ್ಲ ಮತ್ತು ದಕ್ಷಿಣಕ್ಕೆ ನನ್ನ ಜಮೀನಿನಲ್ಲಿ ಬಿಟ್ಟಿರುವ ದಾರಿ ಎಂದರೆ ಸರಿ. ಹಕ್ಕು ಬಿಡುಗಡೆ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂಧಿ ಮತ್ತು ದಾವಾ ಎ ಶೆಡ್ಯೂಲ್ ನಲ್ಲಿ ತೋರಿಸಿರುವ ಚಕ್ಕುಬಂಧಿ ಒಂದಕ್ಕೊಂದು ತಾಳೆ ಇಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನ ಸರಿಯಾದ ಚಕ್ಕುಬಂಧಿ ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ನನ್ನ ತಂದೆ ಮಂಜೂರಾಗಿರುವ ಸರ್ವೆ ನಂಬರ್ 66 ರ ಮೇಲೆ ಸದರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ್ 66/ಪಿ2 ನನ್ನ ತಂದೆ ಹೆಸರಿನಲ್ಲಿ ಖಾತೆಯಾಗಿತ್ತು ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ತಲಾ 2 ಎಕರೆ ಯಂತೆ ಮರಿನಾಯಕ ಮತ್ತು ಕೆಂಪೇಗೌಡ ಎಂಬುವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

ಸರ್ವೆ ನಂಬರ್ 66 ರಲ್ಲಿ ಈಗಾಗಲೇ 4 ಎಕರೆ ಮಾರಾಟ ಮಾಡಿರುವುದರಿಂದ ಸದರಿ ಸರ್ವೆ ನಂಬರ್ ನಲ್ಲಿ ಯಾವುದೇ ಜಮೀನು ಇಲ್ಲದೆ ಇದ್ದರುೂ ಸ್ವಾಧೀನ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಾ ನಂ 126/1999 ರಲ್ಲಿ ಸುಳ್ಳು ಚಕ್ಕುಬಂಧಿ ನೀಡಿದ ಗ್ರಾಮ ಲೆಕ್ಕಾಧಿಕಾರಿ ಸಂಜೀವಗೌಡ ರವರನ್ನು ಅಮಾನತುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನನ್ನ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಈಗಾಗಲೇ ಮಾರಾಟ ಮಾಡಿ ಸುಳ್ಳು ಚಕ್ಕುಬಂಧಿ ನೀಡಿ ಸ್ವಾಧೀನ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಾ ನಂ 115/2006 ರಂತೆ ಪ್ರತಿವಾದಿ ನನ್ನ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಪ್ರತಿವಾದಿಗಳ ಪರ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿಯಂತೆ ಪ್ರತಿವಾದಿಗಳೇ ಜಮೀನಿನಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ಈ ಹಿಂದೆ ದಾವೆ ಹೂಡಿದ ಸಂಬಂದರ್ಬದಲ್ಲಿ ನನ್ನ ಜಮೀನು ಅನ್ನು ಅಳತೆ ಮಾಡಿಸಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ಸಮಯದಲ್ಲಿ ಸಹ ಅಳತೆ ಮಾಡಿಸಿರುವುದಿಲ್ಲ. ದಾವಾ ಸ್ವತ್ತು ಹೇಗೆ ಬಂತು ಎಂದು ತೋರಿಸಲು ಮೂಲ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಕ್ಕು ಪತ್ರದ ಆಧಾರದ ಮೇಲೆ ನಿಪಿ 3 ಮತ್ತು 4 ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 66 ರ ಈಗಿನ ಮಾರುಕಟ್ಟೆ ಮೌಲ್ಯ ಸುಮಾರು 5 ಲಕ್ಷ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು 4 ಎಕರೆ ಗೆ ಸಂಬಂದಿಸಿದಂತೆ ನಕಾಶೆಯನ್ನು ಹಾಜರುಪಡಿಸಿಲ್ಲ. ನನ್ನ ಜಮೀನು ಅನ್ನು ಈಗಾಗಲೇ ಮಾರಾಟ ಮಾಡಿರುವುದರಿಂದ ಪ್ರತಿವಾದಿಗಳು 1 ಎಕರೆ 2 ಗುಂಟೆ ಜಮೀನು ಅನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೂ ನನಗೂ ವೈಶಮ್ಯ ಇರುವುದರಿಂದ ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**